ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

10

ಇಲಾಖೆ / ವಿಷಯ : DEPARTMENT / SUBJECT: ಪ್ರಧಾನ ಮಂತ್ರಿ

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯ ಕರ್ನಾಟಕ ದಿನಾಂಕ : DATE 17/2/2021

# ಕೃಷಿ ಕಾಯ್ದೆಗಳನ್ನು ಮತ್ತೊಮ್ಮೆ ಸಮರ್ಥಿಸಿಕೊಂಡ ಪ್ರಧಾನಿ ಮೋದಿ

**ಲಖನೌ:** ರೈತರ ಪ್ರತಿಭಟನೆ ನೆಪದಲ್ಲಿ ಸರಕಾರಕ್ಕೆ ಕಳಂಕ ತರುವ ಟೂಲ್‌ಕಿಟ್ ವಿವಾದಕ್ಕೆ ಹೊಸ ತಿರುವು ಸಿಕ್ಕಿರುವ ಮಧ್ಯೆಯೇ ಪ್ರಧಾನಿ ನರೇಂದ್ರ ಮೋದಿ ಅವರು ಕೃಷಿ ಕಾಯಿದೆಗಳನ್ನು ಮತ್ತೊಮ್ಮೆ ಸಮರ್ಥಿಸಿಕೊಂಡಿದ್ದಾರೆ.



ಉತ್ತರ ಪ್ರದೇಶದ ಬಹರೇಚ್‌ನಲ್ಲಿ ರಾಜ್‌ಭರ್ ಸಮುದಾಯದ ಆದರ್ಶ ಪುರುಷ ಮಹಾರಾಜ ಸುಹೇಲ್‌ದೇವ್ ಅವರ ಪ್ರತಿಮೆ ನಿರ್ಮಾಣಕ್ಕೆ ವಿಡಿಯೊ ಕಾನ್ಫರೆನ್ಸ್ ಮೂಲಕ ಶಂಕುಸ್ಥಾಪನೆ ನೆರವೇರಿಸಿದ ಪ್ರಧಾನಿ ಅವರು, ''ಹೊಸ ಕೃಷಿ ಕಾಯಿದೆಗಳಿಂದ ಸಣ್ಣ ಮತ್ತು ಅತಿಸಣ್ಣ ರೈತರಿಗೆ ಸಾಕಷ್ಟು ಅನುಕೂಲವಿದೆ. ಇದು ಉದ್ಯಮಿಗಳ ಪರವಲ್ಲ, ಕೃಷಿಕರ ಸ್ನೇಹಿಯಾಗಿದೆ. ಅವರ ಆದಾಯ ದ್ವಿಗುಣಕ್ಕೆ ಸಹಕಾರಿಯಾಗಿದೆ,'' ಎಂದು ಹೇಳಿದರು.

''ಹೊಸ ಕಾಯಿದೆಗಳು ತಮ್ಮ ಬದುಕನ್ನು ಸುಧಾರಿಸಲಿವೆ ಎಂಬುದು ಈಗ ಅನ್ನದಾತರಿಗೆ ಅರಿವಾಗುತ್ತಿದೆ. ಹೀಗಾಗಿ ಕಾಯಿದೆಗಳ ವಿರುದ್ಧ ಸುಳ್ಳುಸುದ್ದಿಗಳನ್ನು ಹಬ್ಬಿಸುತ್ತಿರುವ ಸಂಚನ್ನು ರೈತರೇ ಬಯಲು ಮಾಡುತ್ತಿದ್ದಾರೆ,'' ಎಂದು ಪ್ರಧಾನಿ ಹೇಳಿದರು.

''ಈ ವರ್ಷ ಉತ್ತರ ಪ್ರದೇಶದಲ್ಲಿ 65 ಲಕ್ಷ ಟನ್ ಭತ್ತ ಖರೀದಿಸಲಾಗಿದೆ. ಇದು ಕಳೆದ ವರ್ಷಕ್ಕೆ ಹೋಲಿಸಿದರೆ ದುಪ್ಪಟ್ಟು. ಹಾಗೆಯೇ ಕಬ್ಬು ಬೆಳೆಗಾರರ ಸಮಸ್ಯೆ ನಿವಾರಿಸಲು ಕೇಂದ್ರವು ರಾಜ್ಯ ಸರಕಾರಕ್ಕೆ ಆರ್ಥಿಕ ನೆರವು ನೀಡಿದೆ,'' ಎಂದು ಪ್ರಧಾನಿ ಮೋದಿ ವಿವರಿಸಿದರು.